ಕಥೆ

ಗಡಿಬಿಡಿ ಸಂಬಂಧಿಕರನ್ನು ನೋಡುತ್ತಿದ್ದರೆ ಅವನಿಗೆ ತನ್ನ ಮದುವೆ ನೆನಪಿಗೆ ಬಂತು.

ಆ ಕಾಲದಲ್ಲಿ ಇಷ್ಟೊಂದು ಖರ್ಚು ಇರುತ್ತಿರಲಿಲ್ಲ. ಇಷ್ಟು ಅದ್ದೂರಿಯೂ ಇರುತ್ತಿರಲಿಲ್ಲ. ವಸ್ತುಗಳು ಇಷ್ಟು ದುಬಾರಿಯೂ ಇರುತ್ತಿರಲಿಲ್ಲ. ಆದರೂ ಅವನಿಗೆ ಹೆಣ್ಣು ಕೊಟ್ಟ ಮಾವ ಮದುವೆ ಮುಗಿಯುವಷ್ಟರಲ್ಲಿ ಹೈರಾಣಾಗಿದ್ದ. ಅಸ್ಲಾಂ ಮದುವೆಯಾದ ಹುಡುಗಿ ಅವನಿಗೆ ಹತ್ತಿರದ ಸಂಬಂಧಿ. ಅವಳಪ್ಪನದು ಹೂವಿನ ಅಂಗಡಿ. ಮದುವೆ ವಯಸ್ಸಿಗೆ ಬಂದ ನಾಲ್ಕು ಜನ ಮಕ್ಕಳೊಂದಿಗೆ ಒದ್ದಾಡುತ್ತಿದ್ದ. ಆದ್ದರಿಂದಲೇ ಅಸ್ಲಾಂ ಹೆಚ್ಚಿಗೆ ಏನೂ ಬೇಡಿಕೆ ಇಟ್ಟಿರಲಿಲ್ಲ. ಅವರೇ ಕಷ್ಟಪಟ್ಟು ಎಂಟುನೂರು ರೂಪಾಯಿ ವರದಕ್ಷಿಣೆ, ವಾಚು, ಉಂಗುರ ಕೊಟ್ಟಿದ್ದರು. ಆ ಎಂಟುನೂರು ರೂಪಾಯಿಗಳಲ್ಲೇ ಮದುವೆಗೆ ಬೇಕಾದ ಸಾಮಗ್ರಿ, ತನಗೆ ಬಟ್ಟೆಗಳು, ಅಕ್ಕಬಾವಂದಿರಿಗೆ ಬಟ್ಟೆಗಳನ್ನು, ಮದುಮಗಳಿಗೆ ತಾಳಿಸರ ಕೊಂಡಿದ್ದ.

ಸಂಸಾರಕ್ಕೆ ಬೇಕಾದ ದಹೇಜ್ (ಉಣ್ಣುವ ತಟ್ಟೆಯಿಂದ ಹಿಡಿದು ಚೊಂಬಿನವರೆಗೆ) ದೊಡ್ಡಮನಸ್ಸಿನಿಂದ ಬೇಡವೆಂದಿದ್ದ. ಮದುವೆಗೆ ಕೂಡಾ ಹೆಚ್ಚು ಜನ ಸಂಬಂಧಿಕರನ್ನು ಕರೆಯುವುದು ಬೇಡವೆಂದಿದ್ದ. ಇಷ್ಟಕ್ಕೆ ಸಂಭ್ರಮದಿಂದ ಉಬ್ಬಿ ಹೋದ ಯಜಮಾನರು ದಹೇಜಿನ ಹಣದಿಂದ ಮದುವೆಗೆ ಬಂದ ಐವತ್ತು ಅರವತ್ತು ಮಂದಿಗೆ ಪಲಾವು ಮಾಡಿಸಿದ್ದರು.

ಆದರೆ ಆ ಮದುವೆಗೆ ಈ ಮದುವೆಗೆ ಎಷ್ಟೊಂದು ವ್ಯತ್ಯಾಸ. ಆ ದಿನಗಳಲ್ಲಿ ಇಡೀ ಊರಿಗೆ ತಾನೊಬ್ಬನೇ ಮೆಕ್ಯಾನಿಕ್. ಏ ಒನ್ ಕೆಲಸಗಾರ. ಆದರೂ ವರದಕ್ಷಿಣೆ ಕೊಟ್ಟಷ್ಟು ಪಡೆದಿದ್ದ. ಈಗ ಇಡೀ ಊರೆಲ್ಲಾ ಮೆಕ್ಯಾನಿಕ್‌ಗಳೇ. ಎಲ್ಲರೂ ಸಾಬರ ಹುಡುಗರೇ. ಕೆಲಸ ಇದ್ದೂ ಇಲ್ಲದವರೇ. ಆದರೂ ಮದುವೆಯೆಂದರೆ ಲಕ್ಷ ತೆಗಿ ಎನ್ನುತ್ತಿದ್ದಾರೆ. ಇವರೇ ಅಲ್ಲ ಟೈಲರ್‌ಗಳು, ಕಾರ್ಪೆಂಟರುಗಳು, ವೆಲ್ಡರ್‌ಗಳು, ಕಸಾಬರು... ಒಬ್ಬರೇನು ಎಲ್ಲರಿಗೂ ಒಂದೇ ರೇಟು. ಅಂದಿಗೂ ಇಂದಿಗೂ ಸಾಬರ ಬದುಕು ಬದಲಾಗಿಲ್ಲವಾಗಲೀ ವರದಕ್ಷಿಣೆ ಮಾತ್ರ ಮುಗಿಲೆತ್ತರಕ್ಕೇರಿದೆ.

ತನ್ನ ಮದುವೆಯಂತೆ ಅಚ್ಚುಕಟ್ಟಾಗಿ ಈ ಮದುವೆ ಕೂಡಾ ನಡೆಸೋಣವೆಂದರೆ ಮರ್ಯಾದೆಗೆ ಹೋಗಿ ಶರೀಫ್ ಎಷ್ಟು ಕಷ್ಟಪಟ್ಟಿದ್ದಾರೆಂದು ತನಗೆ ಗೊತ್ತು. ಅರವತ್ತು ಸಾವಿರ ವರದಕ್ಷಿಣೆ. ನಲವತ್ತು ಸಾವಿರ ದಹೇಜ್. ಇಪ್ಪತ್ತು ಸಾವಿರ ಬಟ್ಟೆಗಳು. ಮೂವತ್ತು ಸಾವಿರ ರೂಪಾಯಿಗಳ ಪಲಾವ್, ಮೇಲೆ ಚಿಲ್ಲರೆ ಖರ್ಚು. ಮನೆ ಮಾರಿದರೂ ತೀರಿಸಲಾರದಂಥ ಸಾಲ. ಯೋಚನೆ ಮಾಡುತ್ತಿದ್ದಂತೆ ಮನಸ್ಸು ಕಹಿಯಾಗತೊಡಗಿತು. ಅರ್ಧ ಸೇದಿದ ಸಿಗರೇಟನ್ನು ಬಿಸಾಡುವಾಗ ರಿಯಾಜ್ ಬಂದ. 'ಅಸ್ಲಾಮಣ್ಣ ನಿನ್ನನ್ನು ಅಬಿದಕ್ಕ ಕರಿತಿದ್ದಾಳೆ' ಎಂದ.

